ಮಕ್ಕಳಿಗಾಗಿ ಬೈಬಲ್
ಅರ್ಪಿಸುವ



# ಹಿಂಸಿಸುವವನು ಪ್ರಸಂಗಿಸುವವನಾದನು

ಬರಹಗಾರರು: Edward Hughes

ಚಿತ್ರಲೇಖಕರು: Janie Forest

ಅಳವಡಿಸುವವರು: Ruth Klassen

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ದೇವರು ಆದಿ ಸಭೆಯಿಂದ
ಮಹಾತ್ತಾದ ಕಾರ್ಯವನ್ನು
ಮಾಡಿದರು. ಫಿಲಿಪ್ಪನು ಎಂಬ ಒಬ್ಬ
ಮನುಷ್ಯನು ಯೇಸುವಿನ ವಿಷಯವನ್ನು
ಜನಗಳ ಗುಂಪಿನಲ್ಲಿ ಹೇಳುವುದರಲ್ಲಿ ಬಹಳ
ಕಾರ್ಯನಿರತನಾಗಿದ್ದನು.

ಆದರೆ ಅವನನ್ನು ದೇವರು
ಏಕೆ ಮರುಭೂಮಿಗೆ
ಕಳಿಸಿದನು?



ಮರುಭೂಮಿಯಲ್ಲಿ ಒಬ್ಬ ಪ್ರಯಾಣಿಕನು ಪ್ರಯಾಣಮಾಡುತ್ತಾನೆಂದು ತಿಳಿದ ದೇವರು ಪಿಲಿಪ್ಪನನ್ನು ಅಲ್ಲಿಗೆ ಕಳಿಸಿದನು. ಆ ಮಾರ್ಗವಾಗಿ ಕಂಚುಕಿಯು ಐಥಿಯೋಪ್ಯದವರ ರಾಣಿಯಾಗಿದ್ದ ಕಂದಾಕೆಯ ಕೈ ಕೆಳಗೆ ಅಧಿಕಾರಿಯಾಗಿದ್ದವನು ಹೋಗುತ್ತಿದ್ದನು.

ಅವನು ಒಂದು ವಾಕ್ಯಬಾಗವನ್ನು ಓದುತ್ತಿದ್ದನು. ಅದು ಯಾವ ವಾಕ್ಯವೆಂದು ನೀವು ಉಹಿಸಬದುದಾ?





ದೇವರು
ಫಿಲಿಪ್ಪನನ್ನು ನಡೆಸಿದಾಗ,
ಅವನು ನೇರವಾಗಿ ಆ
ವಾಕ್ಯವನ್ನು ಓದುವಂತ
ಅಧಿಕಾರಿಯ ಬಳಿಗೆ ಹೋದನು.



ಆ ಅಧಿಕಾರಿಯು
ಒದುವಂತ ವಾಕ್ಯಭಾಗವು
ಅರ್ಥವಾಗದೆ ಇರುವುದರಿಂದ
ಅವನು ಪಿಲಿಪ್ಪನನ್ನು ತನ್ನೊಂದಿಗೆ
ಬಂದು ಸೇರುವಂತೆ ಹೇಳಿದನು.

ಇದರ ಅರ್ಥವೇನು? ಎಂದು ಅಧಿಕಾರಿಯು ಫಿಲಿಪ್ಪನನ್ನು ಕೇಳಿದನು. ಅದು ಯೇಸುವಿನ ಕುರಿತು ಹೇಳುವಂತದಾಗಿದೆ ಎಂದು ಅವನಿಗೆ ಉಪದೇಶ ಮಾಡಿದನು.





ಆ ಆಫ್ರಿಕಾದ ಮನುಷ್ಯನು
ಸತ್ಯವೇದದ ಸಂದೇಶವನ್ನು ನಂಬಿ ಯೇಸುವೇ
ರಕ್ಷಕನೆಂದು ತಿಳಿದುಕೊಂಡನು. ಅವನು ನೀರನ್ನು
ಕಂಡಾಗ ‘ನನಗೆ ದೀಕ್ಷಾಸ್ಥಾನ ಕೊಡುವುದಕ್ಕೆ
ಏನಾದರು ಅಡ್ಡಿ ಇದೇಯಾ’? ಎಂದು ಕೇಳಿದನು.

ಫಿಲಿಪ್ಪನು ‘ನಿನ್ನ ಪೂರ್ಣಹೃದಿಂದ ನಂಬುತ್ತೀಯ’ ಎಂದು ಕೇಳಿದನು. ಅದಕ್ಕೆ ಅವನು ‘ಯೇಸುಕ್ರಿಸ್ತನು ದೇವರ ಮಗನು ಎಂದು ನಂಬುತ್ತೇನೆ’ ಅಂದನು. ಆಗ ಫಿಲಿಪ್ಪನು ಅವನನ್ನು ನೀರಿನ ಬಳಿಯಲ್ಲಿ ಕರೆದುಕೊಂಡು ಹೋಗಿ ಅವನಿಗೆ ದೀಕ್ಷಾಸ್ನಾನ ಕೊಟ್ಟನು.



ಅವರು ನೀರಿನಿಂದ ಮೇಲಕ್ಕೆ ಬರಲು ದೇವರ ಆತ್ಮನು ಪಿಲಿಪ್ಪನನ್ನು ಬೇರೊಂದು ಕಡೆಗೆ ಎತ್ತಿಕೊಂಡು ಹೋಯಿತು. ಮತ್ತು ಆ ಅಧಿಕಾರಿಯು ಸಂತೋಷವಾಗಿ ತನ್ನ ಮನೆಗೆ ಹೋದನು.



ಕೆಲವರು ಯೇಸುವನ್ನು ತಿರಸ್ಕಾರ ಮಾಡುತ್ತಾರೆ. ಸ್ತೆಫನನು ಫಿಲಿಪ್ಪನ ಸ್ನೇಹಿತನು ಸ್ತೆಫನನನ್ನು ಕೊಂದ ಕೆಲವರು ಯೇಸುವಿನ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಸೌಲನೆನಿಸಿಕೊಂಡ ಮನುಷ್ಯನು ಸ್ತೆಫನನನ್ನು ಕೊಲುವಂತ ವಿಷಯದಲ್ಲಿ ಪಾಲುಗಾರಿಕೆಯನ್ನು ತಗೆದುಕೊಂಡಿರುವುದರಿಂದ ಅವನು ಕ್ರೈಸ್ತರನ್ನು ತಿರಸ್ಕಾರಮಾಡುತ್ತಿದ್ದನು.



ಸೌಲನು ಯೇಸುವನ್ನು ನಂಬಿದಂತ
ಜನರನ್ನು ಬಹಳವಾಗಿ ಹಿಂಸೆಪಡಿಸಿ
ಕೊನೆಗೆ ಯೇಸುವನ್ನು ಹಿಂಬಾಲಿಸುವಂತ
ಸ್ತ್ರಿ ಮತ್ತು ಪುರಷರನ್ನು ಹಿಡಿದು
ಸೆರಮನೆಗೆ ಹಾಕಬೇಕೆಂದು ಮಹಾ
ಯಾಜಕರಿಂದ ಅಪ್ಪಣೆಯನ್ನು
ತಗೆದುಕೊಂಡು ಬರುತ್ತಿದ್ದನು.





ಸೌಲನು ದೇವ
ಜನರನ್ನು ಹಿಂಸಿಸುವಾಗ
ಆದು ನಾನು ಕರ್ತನಾದ
ಯೇಸುವನ್ನೇ
ಹಿಂಸಿಸುತ್ತೆನೆಂದು
ಅವನಿಗೆ ತಿಳಿದಿರಲಿಲ್ಲ.
ಆದುದ್ದರಿಂದ ದೇವರು
ಅದನ್ನು ನಿಲ್ಲಿಸಿದನು.
ಆದರೆ ಹೇಗೆ?

ಸೌಲನು ದಮಸ್ಕದ ಮಾರ್ಗದಲ್ಲಿ
ಬರುವಾಗ ದೇವರು ಅವನನ್ನು
ಸಂದಿಸಿದನು. ಸೌಲನು ಪರಲೋಕದಿಂದ
ಬಂದ ಅತಿಶಯವಾದ ಬೆಳಕನ್ನು ಕಂಡು
ಒಂದು ವಾಣಿಯನ್ನು ಕೇಳಿಸಿಕೊಂಡನು.





ಕರ್ತನೇ ನೀ ಯಾರೆಂದು ಸೌಲನು ಕೂಗಿದನು,
ನೀನು ಹಿಂಸೆ ಪಡಿಸುವ ಯೇಸುವೇ ನಾನು ಎಂದು
ವಾಣಿಯಾಯಿತು.. ಸೌಲನು ಭಯಪಟ್ಟು ಕರ್ತನೇ ನಾನು
ಏನು ಮಾಡಬೇಕೆಂದು ಬಯಸುತ್ತೀಯ ಅಂದನು. ನೀನು
ಎದ್ದು ಪಟಣ್ಟದೊಳಗೆ ಹೋಗು ಅಲ್ಲಿ ನೀನು ಏನು
ಮಾಡಬೇಕೆಂದು ನಿನಗೆ ತಿಳಿಯುತ್ತದೆ ಅಂದನು.

ಸೌಲನ ಜೊತೆಯಲ್ಲಿರುವಂತ
ಜನರು ಆ ಶಬ್ದವನ್ನು ಕೇಳಿದರು
ಆದರೆ ಅವರು ಯಾರನ್ನು
ನೋಡಲಿಲ್ಲ. ಸೌಲನು ಎದ್ದಾಗ
ಅವನು ಕುರುಡನಾಗಿದ್ದನು
ಅವನನ್ನು ದಮಸ್ಕದೊಳಗೆ
ಕರೆದುಕೊಂಡು
ಹೋದರು.



ಸೌಲನು ಮೂರು ದಿನದ ವರಗೂ ಕಣ್ಣು ಕಾಣದೆ ಏನು ತಿನ್ನಲಿಲ್ಲ ಮತ್ತು ಏನು ಕುಡಿಯಲಿಲ್ಲ. ದಮಸ್ಕದ ಮಾರ್ಗದಲ್ಲಿ ಸಂದಿಸಿದಂತ ಯೇಸುವಿಗೆ ಪ್ರಾರ್ಥನೆಯನ್ನು ಮಾಡುತ್ತಿದ್ದನು.



ದೇವರು ಎಲ್ಲವನ್ನು ಸರಿಯಾಗಿ ರೂಪಿಸಿದರು,
ಅಲ್ಲಿ ಅನನೀಯ ಎಂಬುವಂತ ಶಿಷ್ಯನಿದ್ದನು
ದೇವರು ಅವನಿಗೆ ಸೌಲನಿಗೆ ಸಹಾಯಮಾಡಲು
ಕಳಿಸಿದರು. ಅವನು ದೇವರ ಮಾತಿಗೆ
ವಿಧೇಯನಾಗಿ ತನ್ನ ಕೈಯನ್ನು ಸೌಲನ
ಮೇಲೆ ಇಟ್ಟನು ಸೌಲನಿಗೆ ಕಣ್ಣು
ತರೆಯಿತು. ಮತ್ತು ಸೌಲನು
ದೇವರ ಆತ್ಮನಿಂದ
ತುಂಬಲ್ಪಟ್ಟನು.



ಸೌಲನು ದೀಕ್ಷಾಸ್ನಾನವನ್ನು
ತಗೆದುಕೊಂಡು ಅಹಾರವನ್ನು
ಸೇವಸಿ ಬಲಹೊಂದಿದನು.
ಅವನು ಬಹಳ ಪ್ರಾಮುಖ್ಯವಾದ
ಕಾರ್ಯವನ್ನು ಮಾಡಬೇಕಾಗಿದೆ.



ಮತ್ತು ಸೌಲನು ಸಭಾ ಮಂದಿರಗಳಲ್ಲಿ ಯೇಸುವೇ ದೇವರ ಮಗನೆಂದು ಉಪದೇಶವನ್ನು ಮಾಡಲು ಪ್ರಾರಂಭಿಸಿದನು. ಅದನ್ನು ಕೇಳಿ ಎಲ್ಲರಿಗೆ ಆಶ್ಚರ್ಯವಾಯಿತು ಈತನು ಕ್ರೈಸ್ತರನ್ನು ನಾಶ ಮಾಡಲು ಹೊರಟಂತ ಮನುಷ್ಯನಲ್ಲವೇ? ಇನ್ನೂ ಕೆಲವರು ಅವನನ್ನು ಕೊಲ್ಲಲು ನೋಡಿದರು.





ಸೌಲನ ವೈರಿಗಳು ಅವನನ್ನು
ಕೊಲ್ಲುವುದಕ್ಕಾಗಿ ಅವನು
ಪಟ್ಟಣದಿಂದ ಹೊರಗೆ
ಬರುವುದನ್ನೆ ಕಾಯುತ್ತಿದ್ದರು.
ಆದರೆ ಅವನ ಕ್ರೈಸ್ತ ಸ್ನೇಹಿತರು
ಅದನ್ನು ತಿಳಿದು ರಾತ್ರಿಯಲ್ಲಿ
ಅವನನ್ನು ದೊಡ್ಡ ಬುಟ್ಟಿಯಲ್ಲಿ
ಹಾಕಿ ಗೋಡೆಯಿಂದ ಕೆಳಗಿಳಿಸಿ
ಅವನ್ನು ಕಳಿಸಿಕೊಟ್ಟರು.



ಅಲ್ಲಿಂದ ಸೌಲನು ತನ್ನ
ಕರ್ತನು, ಗುರುವು
ಆದಂತಹ ಯೇಸುವಿನ
ನಿಮಿತ್ತ ಹಿಂಸೆಯನ್ನು
ಅನುಭವಿಸುವುದಕ್ಕೆ
ನಂಬಿಸ್ತನಾದ
ಹಿಂಬಾಲಿಕನಾದನು.

ಹಿಂಸಿಸುವವನು ಪ್ರಸಂಗಿಸುವವನಾದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಅಪೋಸ್ತಲರ ಕೃತ್ಯ **8–9**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ **119:130**

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16